**ಸಿ.ಸಿ. ನಂ. 347/2014** **ಪಿ.ಡಬ್ಲ್ಯೂ-1**

**ಸಾಕ್ಷಿಗೆ ದಿನಾಂಕ 28.2.2024 ರಂದು ಪ್ರಮಾಣವಚನ ಬೋಧಿಸಲಾಯಿತು.**

<u>ಪಾಟೀಸವಾಲುಃ ಆರೋಪಿ ಪರ ಶ್ರೀ ಜಿ.ಎನ್.ಎನ್ ವಕೀಲರಿಂದಃ</u>

ಜಿಲ್ಲಾ ಸಹಾಯಕ ಸಹಕಾರ ಸಂಘಗಳ ನಿಬಂಧಕರು ದೂರು ನೀಡಲು ನನಗೆ ನೀಡಿರುವ ಅಧಿಕಾರ ಪತ್ರವನ್ನು ಠಾಣೆಗೆ ಅಥವಾ ನ್ಯಾಯಾಲಯಕ್ಕೆ ನೀಡಿರುವುದಿಲ್ಲ. ನಿಪಿ1 ರಲ್ಲಿ ನಮೂದಿಸಿರುವ ಉಲ್ಲೇಖ 1 ಮತ್ತು 2 ರಲ್ಲಿ ನಮೂದಿಸಿರುವ ಎರಡು ದಾಖಲೆಗಳನ್ನು ಠಾಣೆಗೆ ಅಥವಾ ನ್ಯಾಯಾಲಯಕ್ಕೆ ನೀಡಿರುವುದಿಲ್ಲ. ನಾನು ದೂರಿನ ಜೊತೆ ಸಹಕಾರ ಸಂಘಗಳ ಕಾಯ್ದೆ ಕಲಂ 64 ರ ವಿಚಾರಣಾ ವರದಿಯನ್ನು ಪೋಲಿಸರಿಗೆ ನೀಡಿರುವುದಿಲ್ಲ. ನಾನು ನಿಪಿ1 ರಲ್ಲಿ ಹೇಳಿರುವ 2001-02 ಸಾಲಿನಿಂದ 2005-06 ಸಾಲಿನವರೆಗೆ ದುರುಪಯೋಗವಾಗಿದೆ ಎಂದು ಹೇಳುವ ಹಣದ ಬಗ್ಗೆ ದಾಖಲಾತಿಯನ್ನು ದೂರಿನ ಜೊತೆ ನೀಡಿರುವುದಿಲ್ಲ. ನಾನು ನಿಪಿ1 ದೂರನ್ನು ಸಹಕಾರ ಕಾಯ್ದೆ ಕಲಂ64 ಅಥವಾ ಲೆಕ್ಕಪರಿಶೋಧನ ವರದಿಯ ಆಧಾರದ ಮೇಲೆ ನೀಡಿರುವುದಿಲ್ಲ,

ಜಿಲ್ಲಾ ಸಹಾಯಕ ಸಹಕಾರ ಸಂಘಗಳ ನಿಬಂಧಕರು ನೀಡಿರುವ ಅಧಿಕಾರ ಪತ್ರದ ಮೇಲೆ ದೂರು ನೀಡಿರುತ್ತೇನೆ. ನಾನು ನಿಪಿ1 ರಂತೆ ದೂರು ನೀಡಿದ ನಂತರ ತನಿಖಾಧಿಕಾರಿ ನನ್ನನ್ನು ಕರೆಸಿ ಪುನಃ ವಿಚಾರಣೆ ಮಾಡಿರುವುದಿಲ್ಲ. ಆರೋಪಿ ಯಾವುದೇ ಹಣವನ್ನು ದುರುಪಯೋಗಪಡಿಸಿಕೊಳ್ಳದಿದ್ದರೂ ಸಹ ಮೇಲಾಧಿಕಾರಿಯ ಆದೇಶದ ಮೇರೆಗೆ ಆರೋಪಿಯ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ